ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 04/03/2020

# ಪ್ರತಿಪಕ್ಷ ದೊರೆಸ್ವಾಮಿ ಆಲಾಪ, ಬಿಜೆಪಿ ಪ್ರಲಾಪ

ವಿಧಾನ ಪರಿಷತ್: ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಅವರ ವಿರುದ್ಧ ಸದನದಲ್ಲಿ ಘೋಷಣೆ ಮೊಳಗಿಸಿದ ಬಿಜೆಪಿ ಸದಸ್ಯರ ವರ್ತನೆಗೆ ಜೆಡಿಎಸ್ ಸದಸ್ಯ ಶ್ರೀಕಂಠೇಗೌಡರು ಕ್ರಿಯಾಲೋಪ ಎತ್ತಿ ಕ್ಷಮೆ ಕೇಳಲು ಪಟ್ಟು ಹಿಡಿದ ವಿಷಯ ಸದನದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ವಾಕ್ಸಮರ ನಡೆದು ಕಲಾಪ ಮುಳುಗಿ ಹೋಯಿತು.

ನಿಯಮ 342ರ ಅಡಿ ಚರ್ಚೆಯ ಮೇಲೆ ಮಾತನಾಡಿದ ಕಾಂಗ್ರೆಸ್ ಸದಸ್ಯ ಐವಾನ್ ಡಿಸೋಜಾ, ಬಿಜೆಪಿಗೆ ಪ್ರಜಾಪ್ರಭುತ್ವದ ಬಗ್ಗೆ ಗೌರವವಿಲ್ಲ, ದೊರೆಸ್ವಾಮಿ ಪರವಾಗಿ ಇರಬೇಕಿತ್ತು. ಆದರೆ ಬಿಜೆಪಿ ನಾಯಕರು ಯತ್ನಾಳ್ ಹೇಳಿಕೆ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಯತ್ನಾಳ್ ಅವರು ದೊರೆಸ್ವಾಮಿ ಅವರನ್ನು ನಕಲಿ ಸ್ವಾತಂತ್ರ್ಯ ಹೋರಾಟಗಾರ ಎಂದು ಬಹಿರಂಗವಾಗಿ ಹೇಳಿಕೆ ಕೊಟ್ಟರೂ ಬಿಜೆಪಿಯವರು ಅದನ್ನ ಸಮರ್ಥನೆ ಮಾಡ್ಕೊಂಡಿದ್ದಾರೆ. ಆದರೂ ಪೊಲೀಸರು ಯತ್ನಾಳ್ ವಿರುದ್ಧ ಯಾವ ಕ್ರಮ ಕೈಗೊಂಡಿಲ್ಲ. ಸಚಿವರು ಅವರಿಗೆ ಬೆಂಬಲ ಕೊಡುತ್ತಿದ್ದಾರೆ. ಯತ್ನಾಳ ವಿರುದ್ಧ 23 ಕ್ರಿಮಿನಲ್ ಕೇಸ್ ಇವೆ. ಬಿಜೆಪಿ ಅವರು ಏನು ಮಾತಾಡಿದರೂ ಯಾವ ಕೇಸ್ ಹಾಕಲ್ಲ. ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಅವರನ್ನು ಪಾಕಿಸ್ತಾನ ಏಜೆಂಟ್



ಅಂದರೂ ಯಾವ ಕೇಸ್ ಇಲ್ಲವೆಂದು ಕಿಡಿಕಾರಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಹಿಂದೆ ಕೊಲೆ ಮಾಡಿ ಅಂತ ಮಾಜಿ ಸಿಎಂ ಹೇಳಿದರು. ಆವಾಗ ದೇಶ ವಿರೋಧಿ ಕೇಸ್ ಹಾಕಿದ್ದೀರಾ ಎಂದು ಪ್ರತಿಪಕ್ಷ ಸದಸ್ಯರನ್ನು ಪ್ರಶ್ನಿಸಿದರು. ಪ್ರಧಾನಿ ನರೇಂದ್ರ ಮೋದಿ ಕೊಲೆಗಡುಕ ಎಂದು ಸಿದ್ದರಾಮಯ್ಯ ಹೇಳಿದ್ದರು. ಅವರು ಮೊದಲು ಕ್ಷಮೆ ಕೇಳಲಿ ಎಂದು ತೇಜಸ್ವಿನಿ ಗೌಡ ಒತ್ತಾಯಿಸಿದರು. ಪ್ರಧಾನಿ ಅವರನ್ನು ಮುಗಿಸಿ ಅಂತ ದೊರೆಸ್ವಾಮಿ ಅಪ್ಪಣೆ ಹೊರಡಿಸುತ್ತಾರೆ. ಇದು ಸರಿಯೇ? ದೊರೆಸ್ವಾಮಿಗೆ ನಾಚಿಕೆಯಾಗಬೇಕು, ಅವರಿಗೆ ಧಿಕ್ಕಾರ ಎಂದು ಬಿಜೆಪಿ ಸದಸ್ಯ ರವಿಕುಮಾರ್ ಘೋಷಣೆ ಕೂಗಿದರು. ಇದಕ್ಕೆ ಕಾಂಗ್ರೆಸ್, ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

## ಅರುಣ್ ಶಹಾಪೂರ ಸಭಾಪತಿ ವಾಗ್ವಾದ

ವಿಪಕ್ಷ ನಾಯಕರು ದೊರೆಸ್ವಾಮಿಗೆ ಆಗಿರುವ ಅಪಮಾನ ಕುರಿತು ಪ್ರಸ್ತಾಪಿಸುವ ವೇಳೆ ಬಿಜೆಪಿ ನಾಯಕರು ಎದ್ದು ವಾಗ್ವಾಳಿ ನಡೆಸುತ್ತಿದ್ದರು. ಈ ವೇಳೆ ಆಡಳಿತ ಪಕ್ಷದ ಸದಸ್ಯ ಅರುಣ್ ಶಹಪೂರ, ತಾವು ಮಾತನಾಡಲು ಹಲವಾರು ಬಾರಿ ಎದ್ದು ನಿಂತರೂ ನಮಗೆ ಅವಕಾಶ ನೀಡುತ್ತಿಲ್ಲ. ಪೀಠದ ಬಗ್ಗೆ ನಮಗೆ ಗೌರವ ಇದೆ. ಮಾತನಾಡಲು ಅವಕಾಶ ಮಾಡಿಕೊಡಿ ಎಂದು ಸಭಾಪತಿಗಳಿಗೆ ಮನವಿ ಮಾಡಿದರು. ಆಗ ಸಭಾಪತಿ ಕಳೆದ ಬಾರಿ ಎಷ್ಟು ದಿನ ಕಲಾಪ ನಡೆದಿದೆ ಎಂದು ಪ್ರಶ್ನಿಸಿದಲ್ಲದೆ, ಈ ಬಾರಿ 25 ದಿನ ನಡೆಯುತ್ತದೆ ಸುಮ್ಮನೆ ಇರಬೇಕು ಎಂದು ಅವರೇ ಉತ್ತರಿಸಿದರು. ಮಾತು ಮುಂದುವರಿಸಿದ ಸಭಾಪತಿ ಪ್ರತಾಪ್‌ಚಂದ್ರ ಶೆಟ್ಟಿ, ನೀವು ಹೇಳಿದ ರೀತಿ ಸದನ ನಡೆಸಲು ಆಗುವುದಿಲ್ಲ ಎಂದು ಹೇಳಿದ್ದು ಅರುಣ್ ಶಹಪೂರ ಮತ್ತು ಸಭಾಪತಿ ನಡುವೆ ವಾಗ್ವಾದಕ್ಕೆ ಕಾರಣವಾಯಿತು.

9